**ದಿನಾಂಕ:19-01-2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು:ಶ್ರೀ.ಎಸ್.ಟಿ.ಎಸ್. ವಕೀಲರಿಂದ ಪ್ರತಿವಾದಿ ಪರವಾಗಿ :-**

ನಾನು 7 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. 7 ನೇ ತರಗತಿಯನ್ನು ನಾನು ನಿತ್ಯಾನಂದ ಮುನ್ಸಿಪಲ್ ಶಾಲೆಯಲ್ಲಿ ಓದಿರುತ್ತೇನೆ. ನನ್ನ ತವರು ಮನೆ ಯರಂಡಿಯಲ್ಲಿ ಇರುತ್ತದೆ. ಮುಂಬೈನಲ್ಲಿ 60 ವರ್ಷಗಳಿಂದ ವಾಸವಿರುತ್ತೇವೆ. ನನ್ನ ಚುನಾವಣೆಯ ಮತದಾನ ಠೇವಣಿ ಮುಂಬೈನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಪಡಿತರ ಚೀಟಿಯು ಮುಂಬೈ ನಗರದ್ದಾಗಿರುತ್ತದೆ. ನನ್ನ ತಾಯಿ ಹೆಸರು ಮಲ್ಲಮ್ಮ ಅವರು ರಾಜೇಶ್ವರ ಊರಿನವರಿರುತ್ತಾರೆ. ನನ್ನ ಮದುವೆ ವೇಳೆಯಲ್ಲಿ ನನಗೆ 22 ವರ್ಷ ಆಗಿತ್ತು. ನನ್ನ ಮದುವೆ 1985 ರಲ್ಲಿ ಮುಂಬೈಯಲ್ಲಿ ನಮ್ಮ ಮನೆಯಲ್ಲಿ ಆಗಿರುತ್ತದೆ. ನನ್ನ ವಿವಾಹ ರಜಿಸ್ಟರ್ ಡಿಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮಗಳಿಗೆ 3 ವರ್ಷ ಇದ್ದಾಗ ನನ್ನ ಗಂಡ ಬಿಟ್ಟು ಹೋಗಿರುತ್ತಾನೆ. ನನ್ನ ಗಂಡನ ಹೆಸರು ಮನೋಹರ ಮಾರುತಿ ಲಾಡೆ ಇರುತ್ತದೆ. ನನ್ನ ಗಂಡನ ತಂದೆಯ ಹೆಸರು ಮಾರುತಿ ಲಾಡೆ ಇರುತ್ತದೆ ಎಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಗಂಡ ಬಗದೂರಿ ಗ್ರಾಮಕ್ಕೆ ಸೇರಿದವರು ಎಂದು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಅವರ ಚುನಾವಣೆ ಗುರುತಿನ ಚೀಟಿ, ಪಡಿತರ ಚೀಟಿ, ಆಧಾರಕಾರ್ಡಗಳನ್ನು ಸಲ್ಲಿಸಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ದಿವಾಣಿ ನ್ಯಾಯಾಧೀಶರು**
**ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**